ಸಾಕ್ಷಿಯನ್ನು ದಿ:10.01.2022 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಮುಂದುವರೆದ ಪಾಟೀಸವಾಲುಃ- 3 ನೇ ಪ್ರತಿವಾದಿ ಪರ ವಕೀಲರಿಂದ ಃ-**

**1.** ನನಗೆ ದಾವಾ ಆಸ್ತಿಯ ಸರ್ವೆ ನಂ. ಗೊತ್ತಿಲ್ಲ. ನಿ.ಪಿ-1 ರಲ್ಲಿ ಯಾವ ಯಾವ ಸರ್ವೆ ನಂಬರ್ ನಮೂದು ಮಾಡಿದ್ದಾರೆ ಗೊತ್ತಿಲ್ಲ. ಸರ್ವೆ ನಂ.12 ಮತ್ತು 16 ಕ್ಕೆ ಬೇರೆ ಬೇರೆ ಚೆಕ್ಕುಬಂದಿ ಬರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.16 ರಲ್ಲಿ ವಿಸ್ತೀರ್ಣ 0.08 ಗುಂಟೆ ಪೈಕಿ 0.04 ಗುಂಟೆ ನನಗೆ ದಾನಪತ್ರ ಆಗಿರುತ್ತದೆ. ನನಗೆ ದಾನಪತ್ರವಾದ 0.04 ಗುಂಟೆ ಜಮೀನಿನ ಚೆಕ್ಕುಬಂದಿ ಗೊತ್ತಿಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ 3 ನೇ ಪ್ರತಿವಾದಿಯ ತಾತನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರವೂ ಸಹ ಪಹಣಿ ಪತ್ರಿಕೆ ನನ್ನ ತಂದೆಯ ಹೆಸರಿಗೆ ಮುಂದುವರೆದಿತ್ತು ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿಗಿದ್ದ ಪಹಣಿ ಪತ್ರಿಕೆಯನ್ನು ದುರುಪಯೋಗ ಪಡಿಸಿ ಪೌತಿ ಖಾತೆ ಬದಲಾವಣೆ ಮಾಡಿಸಿಕೊಂಡು ನಿ.ಪಿ-1 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 3 ನೇ ಪ್ರತಿವಾದಿಯಿಂದ ಸ್ವಾಧೀನ ಬಿಡಿಸಿಕೊಡಿ ಈ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

**2.** 3 ನೇ ಪ್ರತಿವಾದಿಯ ತಂದೆ ಮರಣ ಹೊಂದಿದ್ದಾಗ ನಾವುಗಳು ಶವ ಸಂಸ್ಕಾರಕ್ಕೆ ಹೋಗಿದ್ದೇವು ಎಂದರೆ ಸರಿ. ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿ.ಡಿ-3 ಎಂದು ಗುರುತಿಸಲಾಯಿತು. ನಿ.ಡಿ-3 ರಲ್ಲಿ 3 ನೇ ಪ್ರತಿವಾದಿಯ ತಂದೆಯನ್ನು ಶವ ಸಂಸ್ಕಾರ ಮಾಡಿದ ಕಲ್ಲಿನ ಪೋಟೋ ಇರುತ್ತದೆ ಎಂದರೆ ಸರಿ. ನಿ.ಪಿ-3 ರ ಕಲ್ಲು ದಾವಾ ಆಸ್ತಿಯಲ್ಲಿ ಇರುತ್ತದೆ ಎಂದರೆ ಸರಿ. ನಿ.ಪಿ-3 ರ ಕಲ್ಲನ್ನು ಹಾಕುವಾಗ ನಾನು ತಕರಾರು ಮಾಡಿಲ್ಲ. ನಿ.ಪಿ-3 ರ ಕಲ್ಲನ್ನು ಹಾಕಿದ ಬಗ್ಗೆ ನಾನು ಪೊಲೀಸರಿಗೆ ಯಾವುದೇ ದೂರನ್ನು ನೀಡಿಲ್ಲ.

3. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಶವ ಸಂಸ್ಕಾರವನ್ನು ತಮ್ಮ ತಮ್ಮ ಜಮೀನಿನಲ್ಲಿ ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿಯು ಅವರಿಗೆ ಜಮೀನು ಇಲ್ಲದ ಕಾರಣ ನಮ್ಮ ಜಮೀನಿಲ್ಲಿ ಶವ ಸಂಸ್ಕಾರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ತನ್ನ ತಂದೆಯ ಶವ ಸಂಸ್ಕಾರವನ್ನು ದಾವಾ ಆಸ್ತಿಯಲ್ಲಿ ಮಾಡಿದ ಕುರಿತು ನಾನು ತಕರಾರು ಮಾಡಿಲ್ಲ. ನನ್ನ ತಂದೆ 3 ನೇ ಪ್ರತಿವಾದಿಗೆ ದಾವಾ ಆಸ್ತಿ ಮಾರಾಟ ಮಾಡಿದ ಕಾರಣ 3 ನೇ ಪ್ರತಿವಾದಿ ತನ್ನ ತಂದೆಯ ಶವ ಸಂಸ್ಕಾರವನ್ನು ದಾವಾ ಆಸ್ತಿಯಲ್ಲಿ ಮಾಡಿರುತ್ತಾನೆ ಎಂದರೆ ಸರಿಯಲ್ಲ.

4. ಕೆಂಪೇಗೌಡ ನನ್ನ ಚಿಕ್ಕಪ್ಪ ಎಂದರೆ ಸರಿ. ಸದರಿ ಕೆಂಪೇಗೌಡನ ಹೆಂಡತಿಯ ಹೆಸರು ಸಿದ್ದಮ್ಮ @ ನಾಥಮ್ಮ ಎಂದರೆ ಸರಿ. ಸದರಿ ಸಿದ್ದಮ್ಮ 3 ನೇ ಪ್ರತಿವಾದಿಯ ತಾತನ ತಮ್ಮನ ಮಗಳು ಎಂದರೆ ಸರಿ. 3 ನೇ ಪ್ರತಿವಾದಿ ನನಗೆ ಸಂಬಂಧಿಕರಾಗಬೇಕು ಎಂದರೆ ಸರಿ. 3 ನೇ ಪ್ರತಿವಾದಿಯ ಚಿಕ್ಕಪ್ಪನ ಮಗ ಮಹದೇವನ ಮಾತು ಕೇಳಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.16 ದಾವಾ ಆಸ್ತಿಯ ಅಕ್ಕ-ಪಕ್ಕದಲ್ಲಿ 3 ನೇ ಪ್ರತಿವಾದಿಗೆ ಸಾಕಷ್ಟು ಜಮೀನು ಇದೆ ಎಂದರೆ ಸರಿ. ಮಹದೇವು ನಾವು ಅನ್ಯೋನ್ಯವಾಗಿರುತ್ತೇವೆ ಎಂದರೆ ಸರಿಯಲ್ಲ. ನಾನು ಮಹದೇವರವರ ವಿರುದ್ದ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. 3 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದ ಕಾರಣ ಅತಿಕ್ರಮ ಪ್ರವೇಶ ಮಾಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಮಳವಳ್ಳಿ.